**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-525/2023 **PW**-1

**ದಿಃ 21.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಜಿ ಎ ಬಿ ವಕೀಲರಿಂದಃ**

ಗಿರಿಯಪ್ಪ ನಲವಾಡಿ ರವರಿಗೆ ಐದು ಜನ ಮಕ್ಕಳು ಅವರೆಂದರೆ ಕೃಷ್ಣಪ್ಪ ನಲವಡಿ, ದುಂಡಪ್ಪ ನಲವಡಿ, ಗುರುನಾಥ ನಲವಡಿ, ಗಿರಿಜವ್ವ ನಲವಡಿ ಮತ್ತು ಸೀತವ್ವ ನಲವಡಿ. ನನ್ನ ತಂದೆ ಗುರುನಾಥ ನಲವಡಿ ರವರು ಅಂದರೆ ಪ್ರತಿವಾದಿ 2 ರವರು ನಮ್ಮ ಒಟ್ಟಿಗೆ ಇರುತ್ತಾರೆಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಒಂದು ಆಪಸಾತ ವಾಟ್ನೀ ತೋರಿಸಿ ಅದರಲ್ಲಿ ಗಿರಿಯಪ್ಪ ನಲವಡಿ, ಕೃಷ್ಣಪ್ಪ ನಲವಡಿ, ದುಂಡಪ್ಪ ಮತ್ತು ಗುರುನಾಥ ನಲವಡಿ ಅಂದರೆ ನನ್ನ ತಂದೆ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಸಹಿ ಮಾಡಿರುವದು ಸುಳ್ಳು ಎನ್ನುತ್ತಾರೆ. 1999 ರಲ್ಲಿ ನಿಮ್ಮ ವಯಸ್ಸೆಸ್ಟು ಎಂದರೆ ಸಾಕ್ಷಿ 13 ವರ್ಷ ಎನುತ್ತಾರೆ. ಆ ಸಮಯದಲ್ಲಿ ನಾನು ಮನೆತನದ ಯಾವದೇ ವ್ಯವಹಾರದಲ್ಲಿ ಭಾಗವಹಿಸುತ್ತಿರಲಿಲ್ಲ ಕಾರಣ ಸಣ್ಣ ಹುಡುಗನಿದ್ದೆ ಎಂದರೆ ಸರಿ. ನನ್ನ ತಂದೆ ಇದುವರೆಗೆ ಮನೆತನದ ಆಸ್ತಿಗಳಲ್ಲಿ ವಾಟ್ನೀಯಾಗಿಲ್ಲ ಎಂದು ದಾವೆ ಮಾಡಿಲ್ಲ ಎಂದರೆ ಸಾಕ್ಷಿ ಅವರು ಮಾಡಿಲ್ಲ ಆ ಕಾರಣಕ್ಕೆ ನಾನು ಮಾಡಿದ್ದೇನೆ ಎನ್ನುತ್ತಾರೆ. ಈಗಾಗಲೇ ಅಣ್ಣತಮ್ಮಂದಿರ ನಡುವೆ ವಾಟ್ನೀಯಾಗಿರುವ ಕಾರಣಕ್ಕೆ ಈ ದಾವೆ ಮಾಡುವ ಅವಶ್ಯಕತೆ ಇಲ್ಲ ಎಂದು ನನಗೆ ಹೇಳಿರುತ್ತಾರೇಂದರೆ ಸಾಕ್ಷಿ ಅವರೇ ಮಾಡು ಎಂದು ಹೇಳಿರುತ್ತಾರೆಂದು ಹೇಳುತ್ತಾರೆ. ನಾನು ದಾವೆ ಮಾಡುವ ವಿಚಾರಕ್ಕೆ ನನ್ನ ತಂದೆ ಮತ್ತು ತಾಯಿ ಇಬ್ಬರೂ ವಿರುದ್ದ ಇರುತ್ತಾರೆಂಬ ಕಾರಣಕ್ಕೆ ಅವರನ್ನು ನಾನು ಈ ದಾವೆಯಲ್ಲಿ ಪ್ರತಿವಾದಿಯಾಗಿ ಕಾಣೆಸಿರುತ್ತೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ವಾಟ್ನೀ ದಾವೆ ಮಾಡಲು ನನ್ನ ತಂದೆ ತಾಯಿಯ ಸಮ್ಮತಿ ಇದೆ ಎಂದು ತೋರಿಸಲು ಅವರನ್ನು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ. ಆಪಸಾತ ವಾಟ್ನಿಯನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯನ್ನು ಯಾವ ಆದಾರದ ಮೇಲೆ ನೀವು ಸುಳ್ಳು ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಮೊದಲು ನೋಟರಿಯಾಗಿಲ್ಲ ಎಂದು ನುಡಿದು ನಂತರ ಅದರಲ್ಲಿ ಸಾಕ್ಷಿದಾರರ ಸಹಿ ಇಲ್ಲ ಮತ್ತು ವೈಟ ಪೇಪರ ಮೇಲಿದೆ ಎಂದು ನುಡಿಯುತ್ತಾರೆ. ಸದರಿ ಆಪಸಾತ ವಾಟ್ನಿಯಲ್ಲಿ ನಾಲ್ಕು ಜನ ಸಾಕ್ಷಿದಾರರ ಸಹಿ ಇದೆ ಎಂದರೆ ಇದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನ ತಂದೆಯ ಸಹೋರಿದಯರಾದ ಗಿರಿಜವ್ವ, ಸೀತವ್ವ ಅಲಿಯಾಸ ರುಕ್ಮಿಣಿ ಇವರ ಹೆಬ್ಬೆಟ್ಟಿನ ಗುರುತುಗಳು ಇವರ ಒಪ್ಪಿಗೆಯಾಗಿ ಸಹಿ ಇವೆ ಎಂದರೆ ಅದರಲ್ಲಿ ಇದೆ ಆದರ ನಿಖರವಾಗಿ ಅವರದು ಹೌದೋ ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಅಸಲು ದಾವಾ ನಂಃ722/2008 ವಾಟ್ನೀಗಾಗಿ ದಾವಾ ಮಾಡಿದ್ದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ದಾವಾ ದಿಃ06.08.2010 ರಂದು ನಾನು ನಡೆಸಿಲ್ಲ ಎಂಬ ಕಾರಣಕ್ಕೆ

ವಜಾ ಗೊಂಡಿತು ಎಂದರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ ನನಗೆ ನನ್ನ ತಂದೆ ಹಾಗೂ ದೊಡಪ್ಪಂದಿರ ನಡುವೆ ವಾಟ್ನಿಯಾಗಿದೆ ಎಂಬ ವಿಚಾರ ಗೊತ್ತಾಗಿ ನಾನು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಆ ಕಾರಣಕ್ಕೆ ದಾವಾ ವಜಾ ಆಯಿತು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಪ್ರತಿವಾರದಿ 5 ಹಾಗೂ 7 ರವರು ತಮ್ಮ ತಂಗಿ ಸೀತವ್ವ ಅಂದರೆ ಪ್ರತಿವಾದಿಗೆ 7 ರವರಿಗೆ ಈ ದಾವಾ ಐಟಂ ನಂಃ3 ಮತ್ತು 4 ಹಾಗೂ ಬಿ ಶೆಡ್ಯೂಲ ಆಸ್ತಿಯನ್ನು ಬಕ್ಷೀಸ್ ಮಾಡಿರುತ್ತಾರೇಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪ್ರತಿವಾದಿ 5 ರವರ ಹೆಂಡತಿ ನನ್ನ ಖಾಸಾ ದೊಡ್ಡಮ್ಮ ಎಂದರೆ ಸರಿ. ಅವರಿಗೂ ಮತ್ತು ಕೃಷ್ಣಪ್ಪ ನಲವಡಿ ರವರಿಗೆ ಸಂಸಾರದ ವಿಚಾರವಾಗಿ ವೈಮನಸ್ಸು ಇದೆ ಎಂದರೆ ಸರಿ. ಪ್ರತಿವಾದಿ 5 ರವರ ಕಡೆಯಿಂದ ನನ್ನ ತಾಯಿಯ ಅಕ್ಕ ಎಂದರೆ ದೊಡ್ಡಮ್ಮ ಪ್ರತಿ ತಿಂಗಳು ಜೀವನಾಂಶ ಪಡೆಯುತ್ತಿದ್ದಾರೆಂದರೆ ಸಾಕ್ಷಿ ಆದೇಶವಾಗಿದೆ ಆದರೆ ಎರಡು ವರ್ಷಗಳಾಯಿತು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 5 ರವರು ತಮ್ಮ ತಂಗಿ ಹೆಸರಿಗೆ ಆಸ್ತಿಗಳನ್ನು ಬಕ್ಷೀಸ್ ಮಾಡಿದ್ದು ನನ್ನ ದೊಡ್ಡಮ್ಮನಿಗೆ ಸಿಟ್ಟು ಬರಿಸಿದೆ ಎಂದರೆ ಸರಿ. ಆ ಕಾರಣಕ್ಕೆ ಅವರು ನನ್ನ ಮೂಲಕ ಈ ವಾಟ್ನೀ ದಾವೆ ಮಾಡುವಂತೆ ಹರಕತ್ತ ಮಾಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. 1999 ರ ವಾಟ್ನೀ ಪ್ರಕಾರ ಶೆಡ್ಯೂಲ ಎ ಐಟಂ 1 ನನ್ನ ತಂದೆ ಹಾಗೂ ಗುರುನಾಥ ಅಂದರೆ 2 ನೇ ಪ್ರತಿವಾದಿ ರವರ ನಡುವೆ ಹಂಚಿಹೋಗಿದೆ ಹಾಗೂ ಐಟಂ ನಂಃ2 ಕೃಷ್ಣಪ್ಪ ನಲವಡಿ ರವರಿಗೆ ಬಂದಿದೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಆದಾದ ನಂತರ ಅಣ್ಣತಮ್ಮಂದಿರು ಅವರವರ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬೇರೆ ಬೇರೆ ಮನೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಬೇರೆ ಬೇರೆ ಮನೆ ಮಾಡಿಕೊಂಡಿದ್ದು ನಿಜ ಆದರೆ ಅದನ್ನು ನಮ್ಮ ಆದಾಯದಿಂದ ಮಾಡಿಕೊಂಡಿರುತ್ತೇವೆ ಕೃಷಿ ಜಮೀನಿಗೆ ಸಂಬಂದಿಸಿದಂತೆ ಯಾವದೇ ಆದಾಯ ಬಂದಿಲ್ಲ ಎನ್ನುತ್ತಾರೆ. ಐಟಂ ನಂಃ 2 ರಿಂದ ಬಂದಂತಹ ಆದಾಯದಿಂದ  ಕೃಷ್ಣಪ್ಪ ನಲವಡಿ ರವರು ಐಟಂ ನಂಃ3, 4 ಹಾಗೂ ಶೆಡ್ಯೂಲ ಬಿ ಆಸ್ತಿಯನ್ನು ಸ್ವಂತವಾಗಿ ಗಳಿಸಿರುತ್ತಾರೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. 1999 ರ ವಾಟ್ನೀ ಪ್ರಕಾರ ತಂದೆ ತಾಯಿಗಳು ಜೀವಂತ ಇರುವವರೆಗೂ ಪ್ರತ್ಯೇಕವಾದ ಉತಾರ ಮಾಡಿಕೊಳ್ಳಬಾರದು ಮತ್ತು ಯಾರ ಹೆಸರನ್ನು ಕೂಡಾ ಪ್ರತ್ಯೇಕವಾಗಿ ಅವರಿಗೆ ಬಂದ ಆಸ್ತಿಗಳಿಗೆ ಹಚ್ಚಿಕೊಳ್ಳಬಾರದೆಂಬ ಕಂಡೀಶನ ಹಾಕಿಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

**(ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.